**ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಎಂ., ಪ್ರತಿವಾದಿ ಪರ ವಕೀಲರಿಂದ**

ಗುರುಸಿದ್ದಪ್ಪರವರ ವಂಶವೃಕ್ಷವನ್ನು ಸಾಬೀತು ಪಡಿಸಲು ನಾನು ಕಂದಾಯ ಇಲಾಖೆಯಿಂದ ದೃಡೀಕೃತ ವಂಶವೃಕ್ಷವನ್ನು ಪಡೆದಿರುತ್ತೇನೆ. ಗುರುಸಿದ್ದಪ್ಪನ 2 ನೇ ಮಗ ಯರನಾಗಪ್ಪರವರು 1981 ರಲ್ಲಿ ಮೃತರಾಗಿರುತ್ತಾರೆ. ಸದರಿ ವಿಚಾರವಾಗಿ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ದೊಡ್ಡತಿಪ್ಪಣ್ಣ , ಬಸಣ್ಣ ಹಾಗೂ ಸಣ್ಣತಿಪ್ಪಣ್ಣ ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿಯವರು ಮೃತರಾಗಿರುವುಕ್ಕೆ ಸಂಬಂದಿಸಿದಂತೆ ಮರಣ ಪ್ರಮಾಣ ಪ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.



1 ನೇ ಪ್ರತಿವಾದಿಯ ಗಂಡ ಯಾವಾಗ ಮೃತರಾಗಿರುತ್ತಾರೆ ಎದು ನನಗೆ ಹೇಳಲು ಆಗುವುದಿಲ್ಲ. ಸದರಿಯವರ ಮರಣ ಪ್ರಮಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಯರನಾಗಪ್ಪನ ಮಗ ಮಲ್ಲಿಕಾರ್ಜುನಪ್ಪರವರಿಗೆ ಚಂದ್ರಮ್ಮ ಎಂದು ಹೆಂಡತಿ ಇರುವುದಿಲ್ಲ. ಮಲ್ಲಿಕಾರ್ಜುನಪ್ಪರವರು ಗಂಗಮ್ಮ ರವರನ್ನು ಮದುವೆಯಾಗಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಗಂಗಮ್ಮರವರು ಹೊಸಪೇಟೆ ತಾಲ್ಲೂಕಿನವರರಾಗಿದ್ದು, ಅವರ ತಂದೆ ತಾಯಿಯವರ ಹೆಸರನ್ನು ಹೇಳಲು ಆಗುವುದಿಲ್ಲ. ಸಾಕ್ಷಿಯ ಮುಂದುವರಿದು ಗಂಗಮ್ಮ ರವರ ತಾಯಿಯ ಹೆಸರು ಲಲಿತಮ್ಮ ಎಂದು ನುಡಿಯುತ್ತಾರೆ. 5 ಮತ್ತು 6 ನೇ ಪ್ರತಿವಾದಿಯರು 4 ನೇ ಪ್ರತಿವಾದಿಯ ಮಕ್ಕಳು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ, ಶಾಲಾ ದಾಖಲಾತಿಯನ್ನು ಹಾಜರು ಪಡಿಸಿರುವುದ್ಲಿಲ. 4 ರಿಂದ 6 ನೇ ಪ್ರತಿವಾದಿಯರು ಮಲ್ಲಿಕಾರ್ಜುನಪ್ಪರವರೊಂದಿಗೆ ವಾಸವಾಗಿರುತ್ತಾರೆ ಎಂದು ತೋರಿಸುವ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಮಲ್ಲಿಕಾರ್ಜುನಪ್ಪನರವರಿಗೆ 1 ನೇ ಪ್ರತಿವಾದಿ ಹೆಂಡತಿಯಾಗಿರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಮಲ್ಲಿಕಾರ್ಜುನಪ್ಪನರವರಿಗೆ 1 ಪ್ರತಿವಾದಿ ಮಾತ್ರ

ಹೆಂಡತಿಯಾಗಿದ್ದು, 2 ಮತ್ತು3 ನೇ ಪ್ರತಿವಾದಿಯರ ವಾರಸುದಾರರಾಗಿದ್ದು, ಸದರಿಯವರನ್ನು ಹೊರತು ಪಡಿಸಿ ಬೇರೆ ಯಾರು ವಾರಸುದಾರರು ಇರುವುದಿಲ್ಲ ಎಂದರೆ ಸರಿಯಲ್ಲ.

ಗುರುಸಿದ್ದಪ್ಪನವರಿಗೆ ನಾಲ್ಕು ಜನ ಮಕ್ಕಳು ಎಂದು ತೋರಿಸಲು ಕಂದಾಯ ಇಲಾಖೆಯಿಂದ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹಾಗೂ ನನ್ನ ಅಣ್ಣಂದಿರ ಮಕ್ಕಳಾದ 7 ರಿಂದ 16 ನೇ ಪ್ರತಿವಾದಿಯರ ನಡುವೆ ಯಾವುದೇ ಬಿನ್ನಾಭಿಪ್ರಾಯಗಳು ಇರುವುದಿಲ್ಲ. 7 ರಿಂದ 14 ನೇ ಪ್ರತಿವಾದಿಗಳು ನಾಯಕನಹಟ್ಟಿಯಲ್ಲಿ ವಾಸ ಇರುವುದಿಲ್ಲ ಎಂದರೆ ಸರಿ. 7 ರಿಂದ 14 ನೇ ಪ್ರತಿವಾದಿಗಳು ಕೂಡ್ಲಿಗಿ ತಾಲ್ಲೂಕು, ಮಾಕನಡುಕು ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾನು ಸಹಾ ಮಾಕನಾಡುಕು ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಅಬ್ಬೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅಬ್ಬೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದು ತೋರಿಸಲು ನಿವಾಸ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ.



ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 31 ಎಕರೆ 21 ಗುಂಟೆ ಇರುತ್ತದೆ ಎಂದರೆ ಸರಿ. ಯರನಾಗಪ್ಪ ರವರು ಸರ್ವೆ ನಂಬರ್ 86 ರಲ್ಲಿ ಯಾವಾಗ ಭಾಗ ತೆಗೆದುಕೊಂಡಿರುತ್ತಾರೆ ಎಂದು ನಾನು ಹುಟ್ಟಿರದ ಕಾರಣ ನನಗೆ ಗೊತ್ತಿರುವುದಿಲ್ಲ. ಯರನಾಗಪ್ಪ ರವರು ಯಾರ ಸಮಕ್ಷಮದಲ್ಲಿ ಭಾಗ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಕೇವಲ ಮಾರಾಟ ಮಾಡಿರುವುದಕ್ಕೆ ಮಾತ್ರ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಯರನಾಗಪ್ಪ ತನ್ನ ಹಿಸ್ಸಾ ಭಾಗವನ್ನು ಪಡೆದಿರುವುದಿಕ್ಕೆ ಸಂಬಂಧಿಸಿದಂತೆ ಪಾಲು ವಿಭಾಗ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಯಾವ ಇಸ್ವಿಯಲ್ಲಿ ಪಾಲು ವಿಭಾಗ ಮಾಡಿಕೊಳಳಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾಲ್ಕೂ ಜನ ಅಣ್ಣ ತಮ್ಮಂದಿರ ನಡುವೆ ಪಾಲು ವಿಭಾಗ ಆಗಿರುತ್ತದೆ.

ದೊಡ್ಡತಿಪ್ಪಣ, ಸಣ್ಣತಿಪ್ಪಣ್ಣ ಹಾಗೂ ಬಸಣ್ಣ ರವರ ಹಿಸ್ಸೆಗೆ ಸರ್ವೆ ನಂಬರ್ 86 ರಲ್ಲಿ ತಲಾ 7 ಎಕರೆ 25 ಗುಂಟೆ ಜಮೀನು ಬಂದಿರುತ್ತದೆ. ಪಾಲು ವಿಭಾಗ ಪ್ರಕಾರ ನಮ್ಮಗಳ ಹೆಸರಿಗೆ ಖಾತೆ ವರ್ಗಾಣೆಯಾಗಿರುವುದಿಲ್ಲ. ಯರನಾಗಪ್ಪ ರವರ ಹೆಸರಿನಲ್ಲಿ ಖಾತೆ ಇತ್ತು.

ದೊಡ್ಡತಿಪ್ಪಣ್ಣನ ಹಿಸ್ಸಾ ಜಮೀನಿನ ಚಕ್ಕುಬಂದಿ ಪೂರ್ವಃ ಕಮ್ಮಾರ ನಾಗಪ್ಪನ ಜಮೀನು, ಪಶ್ಚಿಮಃ ಕೊಂಡ್ಲಹಟ್ಟಿ ತಿಪ್ಪೇಸ್ವಾಮಿ ಜಮೀನು, ಉತ್ತರಃ ಕಮ್ಮಾರ ನಾಗಪ್ಪನ ಜಮೀನು, ದಕ್ಷಿಣಃ ಗೌಡರ ಹಾಲಪ್ಪನ ಜಮೀನು ಇರುತ್ತದೆ.

ಬಸಣ್ಣರವರ ಹಿಸ್ಸಾ ಜಮೀನಿನ ಚಕ್ಕುಬಂದಿ ಪೂರ್ವಃ ಕಮ್ಮಾರ ನಾಗಪ್ಪನ ಜಮೀನು, ಪಶ್ಚಿಮಃ ಕೊಂಡ್ಲಹಟ್ಟಿ ತಿಪ್ಪೇಸ್ವಾಮಿ ಜಮೀನು, ಉತ್ತರಃ ಕಮ್ಮಾರ ನಾಗಪ್ಪನ ಜಮೀನು, ದಕ್ಷಿಣಃ ಗೌಡರ ಹಾಲಪ್ಪನ ಜಮೀನು ಇರುತ್ತದೆ.

ಸಣ್ಣತಿಪ್ಪಣ್ಣನ ಹಿಸ್ಸಾ ಜಮೀನಿನ ಚಕ್ಕುಬಂದಿ ಪೂರ್ವಃ ಕಮ್ಮಾರ ನಾಗಪ್ಪನ ಜಮೀನು, ಪಶ್ಚಿಮಃ ಕೊಂಡ್ಲಹಟ್ಟಿ ತಿಪ್ಪೇಸ್ವಾಮಿ ಜಮೀನು, ಉತ್ತರಃ ಕಮ್ಮಾರ ನಾಗಪ್ಪನ ಜಮೀನು, ದಕ್ಷಿಣಃ ಗೌಡರ ಹಾಲಪ್ಪನ ಜಮೀನು ಇರುತ್ತದೆ. ಸಾಕ್ಷಿಯು ಮುಂದುವರಿದು ಮೂರು ಜನರ ಜಮೀನಿನ ಚಕ್ಕುಬಂದಿ ಒಂದೇ ಇರುತ್ತದೆ ಎಂದು ನುಡಿಯುತ್ತಾರೆ.

ಯರನಾಗಪ್ಪ ತನ್ನ ಹಿಸ್ಸಾ ಜಮೀನನ್ನು 15 ಮತ್ತು 16 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ. ಯಾವ ದಿನಾಂಕ, ತಿಂಗಳು ಮತ್ತು ವರ್ಷ ದಂದು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ರೂ. 1600 /- ಅಥವ 1700/- ರೂಳಿಗೆ ಮಾರಾಟ ಆಗಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಕಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.



ಬಸಣ್ಣ ತನ್ನ ಹಿಸ್ಸಾ ಜಮೀನನ್ನು ಹಾಗೆಯೇ ಉಳಿಸಿಕೊಂಡಿರುತ್ತಾರೆ. ಬಸಣ್ಣ ರವರು ನಷ್ಟ ಸಂತತಿಯಿಂದ ಮೃತರಾಗಿರುತ್ತಾರೆ ಎಂದರೆ ಸರಿ. ಸಣ್ಣ ತಿಪ್ಪಣ್ಣ ರವರು ನಷ್ಟ ಸಂತತಿಯಿಂದ ಮೃತರಾಗಿರುತ್ತಾರೆ ಎಂದರೆ ಸರಿ. ಸಣ್ಣತಿಪ್ಪಣ್ಣ, ದೊಡ್ಡತಿಪ್ಪಣ್ಣ ಹಾಗೂ ಬಸಣ್ಣ ರವರಿಗೆ ಸರ್ವೆ ನಂಬರ್ 86 ರ ಜಮೀನಿನಲ್ಲಿ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ ಸ್ವತ್ತಿನ ಕಂದಾಯ ದಾಖಲೆಗಳನ್ನು ನನ್ನ, ದೊಡ್ಡತಿಪ್ಪಣ್ಣ, ಸಣ್ಣತಿಪ್ಪಣ್ಣ ಹಾಗೂ ಬಸಣ್ಣ ರವರ ಹೆಸರಿನಲ್ಲಿ ಇರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 16 ನೇ ಪ್ರತಿವಾದಿಯು ವಾದಿ ಹಾಗೂ 1 ರಿಂದ 3 ನೇ ಪ್ರತಿವಾದಿಯರಿಗೆ ತಿಳಿಯದ ಹಾಗೆ 15 ನೇ ಪ್ರತಿವಾದಿ , ಬಸಣ್ಣ ಬಿನ್ ಮುದುಕಪ್ಪಗಳ ಗಂಗಪ್ಪ ಹಾಗೂ ತಿಮ್ಮಕ್ಕ ಕೋಂ ಬಸಪ್ಪರವರ ವಿರುದ್ದ ಓ ಎಸ್ 45/2001 ರಂತೆ ಚಳ್ಳಕೆರೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿಯವರು ಪರಸ್ಪರ ಷರೀಕಾಗಿ ಸದರಿ ದಾವೆಯಲ್ಲಿ ರಾಜೀ ಡಿಕ್ರಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ಸದರಿ ರಾಜಿ ಡಿಕ್ರಿಯನ್ನು ಪ್ರಶ್ನಿಸಿ 1 ರಿಂದ 3 ನೇ ಪ್ರತಿವಾದಿಯರು ಚಳ್ಳಕೆರೆಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ. 194/2021 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ಸರ್ವೆ ನಂಬರ್ 86 ರಲ್ಲಿ ಒಟ್ಟು 23 ಎಕರೆ 36 ಗುಂಟೆ ಜಮೀನಿಗೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿ.ಸದರಿ

23 ಎಕರೆ 36 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಸ್ತೆ ಎಂದರೆ ಸರಿ. ಪಶ್ಚಿಮಕ್ಕೆ ಚನ್ನಬಸಪ್ಪನ ಜಮಿನು ಎಂದರೆ ಸರಿ. ಉತ್ತರಕ್ಕೆ ಗೌಡರ ಹಾಲಪ್ಪನ ಜವೀನು ಎಂದರೆ ಸರಿ. ದಕ್ಷಿಣಕ್ಕೆ ಕಮ್ಮಾರ ನಾಗಪ್ಪನವರ ಜಮೀನು ಎಂದರೆ ಸರಿ. ಮಲ್ಲಿಕಾರ್ಜುನಪ್ಪನಮರ ಮೃತರಾದ ನಂತರ 1 ರಿಂದ 3 ನೇ ಪ್ರತಿವಾದಿಯರು ಹಕ್ಕು , ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನಾವು ಸ್ವಾಧೀನಾನುಭವದಲ್ಲಿರುತ್ತೇವೆ ಎಂದು ತೋರಿಸಲು ಯಾವುದೇ ಕಂದಾಯ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿರುವ ಬಗ್ಗೆ ರಸೀದಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 130 ರೂ. ಕಂದಾಯವನ್ನು ಪಾವತಿಸುತ್ತಿದ್ದೇನೆ. ನಾವು ಯಾವಾಗಲೂ ಕಂದಾಯವನ್ನು ಪಾವತಿಸಿಲ್ಲ ಹಾಗೂ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 86 ರಲ್ಲಿ 23 ಎಕರೆ 36 ಗುಂಟೆ ಜಮೀನಿನಲ್ಲಿ ಸಣ್ಣತಿಪ್ಪಣ್ಣ , ದೊಡ್ಡತಿಪ್ಪಣ್ಣ ಹಾಗೂ ಬಸಣ್ಣ ರವರಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.



**ಪಿಡಬ್ಲ್ಯೂ:01**

ದಾವಾ ಸ್ವತ್ತು ನನ್ನ ತಂದೆಯ ಆಸ್ತಿಯಾಗಿರುತ್ತದೆ. ದಾವಾ ನನ್ನ ತಂದೆಗೆ ಸೇರಿತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸ್ವಂತ ಅಣ್ಣತಮ್ಮಂದಿರ ನಡುವೆ 1/3 ಭಾಗ ಬೇಕು ಎಂದು ಕೇಳಿರುತ್ತೇನೆ. 7 ರಿಂದ 14 ನೇ ಪ್ರತಿವಾದಿಯರ ದಾವಾ ಸ್ವತ್ತಿನಲ್ಲಿ ಭಾಗ ಬೇಕು ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 7 ರಿಂದ 14 ನೇ ಪ್ರತಿವಾದಿಯರಿಗೆ ಹಕ್ಕು, ಅಧಿಕಾರ, ಭಾಗಾಂಶ ಇಲ್ಲದ ಕಾರಣ, ದಾವೆಯಲ್ಲಿ ಬಾಗಾಂಶವನ್ನು ಕೇಳಿರುವುದಿಲ್ಲ ಎಂದರೆ ಸರಿ.

ನಿಪಿ.2 ರ ದಾಖಲೆಯಲ್ಲಿರುವ ಖಾತೆದಾರರರಾದ ನಾಗಪ್ಪ ಬಿನ್ ಗುರುಸಿದ್ದಪ್ಪ ಎಂದರೆ 1 ನೇ ಪ್ರತಿವಾದಿಯ ಮಾವ ಎಂದರೆ ಸರಿ. ನಿಪಿ.2 ರ ದಾಖಲೆಯ ಸಮಯದಲ್ಲಿ ಕುಟುಂಬದ ವಂಶವೃಕ್ಷವನ್ನು ಸಲ್ಲಿಸಲಾಗಿತ್ತು. ನಿಪಿ.2 ರ ಪೌತಿ ಖಾತೆ ಬದಲಾವಣೆಗಾಗಿ ನನ್ನ ಚಿಕ್ಕಪ್ಪ ಸಣ್ಣತಿಪ್ಪಣ್ಣ ರವರು ಅರ್ಜಿಯನ್ನು ನೀಡಿರುತ್ತಾರೆ. ಸದರಿ ಪೌತ ಬದಲಾವಣೆಗಾಗಿ ದೊಡ್ಡತಿಪ್ಪಣ್ಣ ಹಾಗೂ ಬಸಣ್ಣ ರವರು ಅರ್ಜಿ ನೀಡಿರುವುದಿಲ್ಲ. ದೊಡ್ಡತಿಪ್ಪಣ ಹಾಗೂ ಬಸಣ್ಣ ರವರ ಮಕ್ಕಳು ಪೌತಿ ಖಾತೆಗಾಗಿ

ಅರ್ಜಿ ನೀಡಿರುವುದಿಲ್ಲ. ಸಣ್ಣತಿಪ್ಪಣ್ಣ ಪೌತಿ ಖಾತೆ ಬದಲಾವಣೆಗಾಗಿ ಯಾವ ದಾಖಲೆಯನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಬಸಣ್ಣ ತನ್ನ ಹಿಸ್ಸಾ ಜಮೀನನ್ನು ಮಾರಾಟ ಮಾಡಿರುವುದಿಲ್ಲ. ದೊಡ್ಡತಿಪ್ಪಣ್ಣ ಹಾಗೂ ಸಣ್ಣತಿಪ್ಪಣ್ಣ ರವರ ಹೆಸರಿಗೆ ಜಂಟಿ ಖಾತೆ ಇರುವುದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯ ಮುಂದುವರಿದು ದೊಡ್ಡತಿಪ್ಪಣ್ಣನ ಮಕ್ಕಳ ಹೆಸರನ್ನು ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.2 ರ ಪ್ರಕಾರ 7 ಎಕರೆ 39 ಗುಂಟೆ ಜಮೀನಿಗೆ ಪೌತಿ ಖಾತೆ ಆಗಿರುತ್ತದೆ. ಪೌತಿ ಖಾತೆಯು 16 ನೇ ಪ್ರವಾದಿಯ ಹೆಸರಿನಲ್ಲಿ ಆಗಿರುತ್ತದೆ. ಸಾಕ್ಷಿಯು ಮುಂದುವರಿದು ಪೌತಿ ಖಾತೆ ಆಗಿರುವುದಿಲ್ಲ ಕೋರ್ಟ್ ಆದೇಶದ ಮೇರೆಗೆ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.2 ರಲ್ಲಿ ಕೊರ್ಟ್ ಆದೇಶದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ.2 ರಲ್ಲಿ ಎಷ್ಟು ಎಕರೆ ಜಮೀನಿಗೆ ಪೌತಿ ಖಾತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ರ ಪ್ರಕಾರ ಪಹಣಿಗಳು ಬಂದಿರುತ್ತವೆ. ನಿಪಿ.2 ರ ಪ್ರಕಾರ ಸಣ್ಣತಿಪ್ಪಣ್ಣ ರವರ ಹೆಸರಿಗೆ 23 ಎಕರೆ ಚಿಲ್ಲರೆ



ಜಮೀನಿಗೆ ಪಹಣಿ ಬಂದಿರುತ್ತದೆ. 23 ಎಕರೆ ಜಮೀನಿನಲ್ಲಿ ಸಣ್ಣತಿಪ್ಪಣ್ಣ ರವರಿಗೆ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲರಿಗೂ ಇರುತ್ತದೆ ಎಂದು ನುಡಿಯುತ್ತಾರೆ.

ಸಣ್ಣತಿಪ್ಪಣ್ಣ ರವರ ಹೆಸರಿನಲ್ಲಿ 23 ಎಕರೆ ಜಮೀನಿಗೆ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹಿರಿಯ ಸಿವಿಲ್ ನ್ಯಾಯಾಲಯ ಸಲ್ಲಿಸಿರುವ ದಾವೆಯು ಇತ್ಯರ್ಥದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೆ ನಂಬರ್ 86 ರಲ್ಲಿ ನನಗೂ ಹಕ್ಕು ಇದೆ ಎಂದು ನಾನು ಅರ್ಜಿಯನ್ನು ಹಾಕಿರುವುದಿಲ್ಲ. ಈ ಪ್ರಕರಣದ ದಾವಾ ಸ್ವತ್ತು ಹಾಗೂ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿರುವ ದಾವಾ ಸ್ವತ್ತಿನ ಭಾಗ ಆಗಿರುತ್ತದೆ ಎಂದರೆ ಸರಿ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ.